ದಿನಾಂಕಃ 04-05-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಂದುವರೆದ ಪಾಟೀ ಸವಾಲುಃ</u>- 1 ರಿಂದ 8 ನೇ ಆರೋಪಿತರ ಪರವಾಗಿ ಶ್ರೀ. ಜಿ.ಬಿ.ಹೆಚ್. ವಕೀಲರಿಂದಃ-**

ನಾನು 2008 ರಿಂದ ನ್ಯಾಯಾಲಯಕ್ಕೆ ಬರುವುದು ಮತ್ತು ಹೋಗುವುದು ಮಾಡುತ್ತಿದ್ದೇನೆ ಎಂದರೆ ಸರಿ. ಈ ನಿವೇಶನಕ್ಕೆ ಸಂಬಂಧಪಟ್ಟಂತೆ ನಾನು ಈ ಹಿಂದೆ 2018 ನೇ ಸಾಲಿನಲ್ಲ ಒಂದು ಸಿವಿಲ್ ದಾವೆ ಸಲ್ಲಿಸಿದ್ದೆನು ಎಂದರೆ ಸರಿ. ಆ ದಾವೆಯಲ್ಲಿ ಏಕಪಕ್ಷೀಯವಾಗಿ ತಾತ್ಕಾಲಿಕ ನಿರ್ಬಂಧಕಾಜ್ಞೆ ಪಡೆದುಕೊಂಡಿದ್ದೆನು ಎಂದರೆ ನನಗೆ ಗೊತ್ತಿಲ್ಲ. ಆ ದಾವೆಯಲ್ಲಿ 1 ನೇ ಆರೋಪಿ, 4 ನೇ ಆರೋಪಿ ಮತ್ತು 5 ನೇ ಆರೋಪಿತರು ಹಾಜರಾಗಿ ತಕರಾರು ಸಲ್ಲಿಸಿದ ನಂತರ ಆ ದಾವೆಯಲ್ಲಿ ನಿರ್ಬಂಧಕಾಜ್ಞೆ ವಜಾ ಆಗಿರುತ್ತದೆ ಎಂದರೆ ಸರಿಯಲ್ಲ. ಆ ಆದೇಶದ ವಿರುದ್ಧ ನಾನು ಇದೇ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದೆನು ಎಂದರೆ ಸರಿಯಲ್ಲ. ಆ ನಿರ್ಬಂಧಕಾಜ್ಞೆ ಆದೇಶ ವಜಾ ಆದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ತಾಲ್ಲೂಕು ಕಾರ್ಯನಿರ್ವಹಣಾಧಿಕಾರಿಗಳ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದು ಅದು ಇನ್ನೂ ಸಹ ಇತ್ಯರ್ಥ ಆಗಿರುವುದಿಲ್ಲ. ನನಗೆ ಸೇರಿದ ಕಟ್ಟಡವನ್ನು ಆರೋಪಿತರು ಹೊಡೆದು ಹಾಕಿರುವ ಬಗ್ಗೆ ಯಾರೂ ಸಹ ನೋಡಿರುವುದಿಲ್ಲ. ಈ ಬಗ್ಗೆ ಪಂಚಾಯಿತಿ ಅಧಿಕಾರಿಗಳು ಕ್ರಮ ತೆಗೆದುಕೊಳ್ಳದೇ ಇರುವ ಬಗ್ಗೆ ಅವರ ಮೇಲಾಧಿಕಾರಿಗಳಿಗೆ ಅರ್ಜಿ ಸಲ್ಲಿಸಿರುತ್ತೇನೆ. ಪೊಲೀಸರು ಸಹ ಸ್ಥಳಕ್ಕೆ ಹಾಜರಾಗಿ ಕಟ್ಟಡವನ್ನು ನಿರ್ಮಿಸದಂತೆ ಆರೋಪಿತರಿಗೆ ತಿಳಿಸಿದ್ದರೂ ಸಹ

ಆರೋಪಿತರು ಅವರ ಮಾತನ್ನು ಕೇಳಿರುವುದಿಲ್ಲ. ಈ ಬಗ್ಗೆ ಪೊಲೀಸರು ಲಿಖಿತವಾಗಿ ದಾಖಲೆಯನ್ನು ನೀಡಿರುತ್ತಾರೆ. ಆ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ಆ ಮನೆ ನನ್ನ ಹೆಸರಿನಲ್ಲಿರುವ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನನ್ನ ತಂದೆಯ ಹೆಸರಿನಲ್ಲಿ ಈ ಆಸ್ತಿಯನ್ನು ಹೊರತುಪಡಿಸಿ ಇನ್ನೂ ಸಹ ಎರಡು ಆಸ್ತಿಗಳು ಇವೆ. ನನ್ನ ಹೆಸರಿನಲ್ಲಿ ಆಶ್ರಯ ಯೋಜನೆಯಡಿ ಒಂದು ಮನೆಯನ್ನು ಮಂಜೂರು ಮಾಡಿದ್ದು, ಅದರಂತೆ ಮನೆ ಕಟ್ಟಿಕೊಂಡಿರುತ್ತೇನೆ. ನಾನು ಮನೆ ಕಟ್ಟಿಕೊಂಡಿರುವ ನಿವೇಶನಕ್ಕೆ ಸಂಬಂಧಪಟ್ಟಂತೆ ಸರ್ಕಾರದಿಂದ ಮಂಜೂರಾತಿ ಪತ್ರ ಹಾಗೂ ಹಕ್ಕ ಪತ್ರವನ್ನು ನೀಡಿರುವುದಿಲ್ಲ. ನನಗೆ ನನ್ನ ತಾತನಿಂದ ಬಂದ ನಿವೇಶನಕ್ಕೆ ಮನೆ ಕಟ್ಟಿಕೊಳ್ಳಲು ಸರ್ಕಾರದಿಂದ ಹಣ ಮಂಜೂರು ಮಾಡಿದ್ದಾರೆ ಅದರಂತೆ ಮನೆ ಕಟ್ಟಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು 1 ಆರೋಪಿ ಮೂಲತಃ ಒಂದೇ ಕುಟುಂಬದವರು. 1 ನೇ ಆರೋಪಿಯ ತಂದೆಯ ಹೆಸರಿಗೆ ಯಾವುದೇ ನಿವೇಶನ ಇರುವುದಿಲ್ಲ. 1 ನೇ ಆರೋಪಿಗೆ ಸೇರಿದ ನಿವೇಶನವನ್ನು ಆತ 5 ನೇ ಆರೋಪಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ನನ್ನ ಮತ್ತು 1 ನೇ ಆರೋಪಿಯ ನಡುವೆ 2008 ರಿಂದಲೂ ಸಹ ವೈಮನಸ್ಸು ಇದೆ ಎಂದರೆ ಸರಿಯಲ್ಲ. 1 ನೇ ಆರೋಪಿಯ ವಿರುದ್ಧ ದ್ವೇಷ ಸಾಧಿಸುವ ಉದ್ದೇಶದಿಂದ ಇತರೆ ಆರೋಪಿತರ ವಿರುದ್ಧ ಸುಳ್ಳು ದೂರನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ನೀಡಿದ ದೂರಿಗೆ ಸಂಬಂಧಪಟ್ಟಂತೆ ಪೊಲೀಸರು ನನ್ನನ್ನು ಠಾಣೆಗೆ ಕರೆಸಿ ಬುದ್ದಿವಾದ ಹೇಳಿ ಕಳುಹಿಸಿದ್ದಾರೆ ಎಂದರೆ ಸರಿಯಲ್ಲ.

1 ನೇ ಆರೋಪಿಯ ಹೆಸರಿನಲ್ಲಿರುವ ಖಾತೆಯನ್ನು ನನ್ನ ಹೆಸರಿಗೆ ಬದಲಾವಣೆ ಮಾಡಿಕೊಡುವಂತೆ ಕೋರಿ 9 ರಿಂದ 12 ನೇ ಆರೋಪಿತರನ್ನು ಕೇಳಿದ್ದೇನೆ ಎಂದರೆ ಸರಿಯಲ್ಲ. 1 ಮತ್ತು 5 ನೇ ಆರೋಪಿತರ ಆಸ್ತಿಯ ಸ್ವಾಧೀನಾನುಭವಕ್ಕೆ ತೊಂದರೆ ನೀಡಿದ ಕಾರಣ ನನ್ನ ವಿರುದ್ಧ ಮತ್ತೊಂದು ಪ್ರಕರಣ ದಾಖಲಿಸಿದ್ದಾರೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ಎಲ್ಲಾ ದಾಖಲೆಗಳನ್ನು ಈ ಕೇಸಿಗೋಸ್ಕರ ಸೃಷ್ಟಿಸಿಕೊಂಡು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

**<u>ಮುಂದುವರೆದ ಪಾಟೀ ಸವಾಲುಃ</u>– 9 ರಿಂದ 12 ನೇ ಆರೋಪಿತರ ಪರವಾಗಿ ಶ್ರೀ. ಪಿ.ಸಿ.ಕೆ.ಆರ್. ವಕೀಲರಿಂದಃ–**

ನಾವು ಒಟ್ಟು 5 ಜನ ಅಣ್ಣ ತಮ್ಮಂದಿರು ಇದ್ದೇವೆ. ನನ್ನ ಸಹೋದರರು ಸಿವಿಲ್ ದಾವೆ ಸಲ್ಲಿಸಲು ನನಗೆ ಅಧಿಕಾರ ಪತ್ರ ಬರೆದುಕೊಟ್ಟಿರುವುದಿಲ್ಲ ಈ ಆಸ್ತಿಗೆ ಸಂಬಂಧಪಟ್ಟಂತೆ ನಾನು ಒಬ್ಬನೇ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿರುತ್ತೇನೆ. ನಿವೇಶನ ಸಂ.122/3, ಸ್ವತ್ತಿನ ಸಂ.20 ರ ಆಸ್ತಿ ನನ್ನ ತಂದೆ ಹೆಸರಿನಲ್ಲಿದೆ ಎಂದರೆ ಸರಿ. ಆದರೆ ಸಾಕ್ಷಿಯು, ಅದರಲ್ಲಿರುವ ಕಟ್ಟಡವನ್ನು ಹೊಡೆದು ಹಾಕಿರುತ್ತಾರೆ ಎಂದು ಸ್ವತಃ ನುಡಿಯುತ್ತಾರೆ. ನಿವೇಶನ ಸಂ.122/3, ಸ್ವತ್ತಿನ ಸಂ.20 ಎಂಬ ಬಗ್ಗೆ ದಾಖಲೆಗಳನ್ನು ಈ ಕೇಸಿನಲ್ಲಿ ಹಾಜರುಪಡಿಸಿರುತ್ತೇನೆ. ಈ ಬಗ್ಗೆ ದಾಖಲೆಗಳನ್ನು ಸಿವಿಲ್ ದಾವೆಯಲ್ಲಿ

ಹಾಜರುಪಡಿಸಿರುತ್ತೇನೆ. ಆ ಸಿವಿಲ್ ದಾವೆಯಲ್ಲಿ ನಾನು 9 ರಿಂದ 12 ನೇ ಆರೋಪಿತರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. 1 ನೇ ಆರೋಪಿ ನಿವೇಶನ ಸಂ.128 ಕ್ಕೆ ಸಂಬಂಧಪಟ್ಟಂತೆ ಖಾತಾ ಬದಲಾವಣೆ ಕೋರಿ 9 ರಿಂದ 12 ನೇ ಆರೋಪಿತರಿಗೆ ಅರ್ಜಿ ಸಲ್ಲಿಸಿದ್ದು, ನನಗೆ ಸಂಬಂದಪಟ್ಟ ನಿವೇಶನ ಸಂ.122/3 ಕ್ಕೆ ಅರ್ಜಿ ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. 9 ರಿಂದ 12 ನೇ ಆರೋಪಿತರು ನಿವೇಶನ ಸಂ. 128 ಕ್ಕೆ ಸಂಬಂಪಟ್ಟಂತೆ 1 ನೇ ಆರೋಪಿಯ ಹೆಸರಿಗೆ ಖಾತಾ ಬದಲಾವಣೆ ಮಾಡಿದ್ದು, ನಿವೇಶನ ಸಂ.122/3 ಕ್ಕೆ ಮಾಡಿರುವುದಿಲ್ಲ ಎಂದರೆ ಅವರು ಮೋಸದಿಂದ ಮಾಡಿದ್ದಾರೆ ಎಂದು ಸ್ವತಃ ನುಡಿಯುತ್ತಾರೆ. 9 ರಿಂದ 12 ಆರೋಪಿತರು ಹಳೆಯ ದಾಖಲೆಗಳ ಆಧಾರದ ಮೇಲೆ 1 ನೇ ಆರೋಪಿಯ ಹೆಸರಿಗೆ ಖಾತಾ ಬದಲಾವಣೆ ಮಾಡಿದ್ದು, ನನಗೆ ಸೇರಿದ ನಿವೇಶನ ಸಂ.122/3 ಕ್ಕೆ ಸಂಬಂಧಪಟ್ಟಂತೆ ಯಾವುದೇ ಖಾತಾ ಬದಲಾವಣೆ ಮಾಡಿರುವುದಿಲ್ಲ ಎಂದರೆ ಸರಿ. 9 ರಿಂದ 12 ನೇ ಆರೋಪಿತರು 1 ನೇ ಆರೋಪಿಯಿಂದ ಲಂಚ ಸ್ವೀಕರಿಸಿ ಖಾತಾ ಬದಲಾವಣೆ ಮಾಡಿರುವುದನ್ನು ನಾನು ನೋಡಿರುವುದಿಲ್ಲ, ಈ ಬಗ್ಗೆ ನಾನು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

ಆರೋಪಿತರು ಅಕ್ರಮ ಗುಂಪು ಕಟ್ಟಿದ ಬಗ್ಗೆ ದಾಖಲೆಗಳನ್ನು ನಾನು ಪೊಲೀಸರಿಗೆ ನೀಡಿರುತ್ತೇನೆ. ಈ ಬಗ್ಗೆ ನಾನು ಪೊಲೀಸರಿಗೆ ದೂರು ನೀಡಿರುತ್ತೇನೆ. ಆ ದೂರು ನೊಂದಣಿ ಆಗಿರುವುದಿಲ್ಲ. ನಾನೇ ಆರೋಪಿತರ ವಿರುದ್ಧ ಸುಳ್ಳು ದೂರನ್ನು ಸಲ್ಲಿಸಿ

ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 9 ರಿಂದ 12 ನೇ ಆರೋಪಿತರು ಯಾವುದೇ ದಾಖಲೆಗಳನ್ನು ಸೃಷ್ಟಿಸಿಕೊಂಡಿರುವುದಿಲ್ಲ ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 9 ರಿಂದ 12 ನೇ ಆರೋಪಿತರು ಸುಳ್ಳು ದಾಖಲೆಗಳ ಆಧಾರದ ಮೇಲೆ 1 ನೇ ಆರೋಪಿಗೆ ಲೈಸೆನ್ಸ್ ನೀಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 9 ರಿಂದ 12 ನೇ ಆರೋಪಿತರು ಯಾವುದೇ ಅಕ್ರಮ ಎಸಗಿರುವುದಿಲ್ಲ ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನೀಡಿದ ದೂರಿಗೆ ಸಂಬಂಧಪಟ್ಟಂತೆ ಪೊಲೀಸರು ಈ ವಿಷಯ ಸಿವಿಲ್ ಗೆ ಸಂಬಂಧಪಟ್ಟಿದ್ದಾಗಿದ್ದು, ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳುವಂತೆ ಹಿಂಬರಹ ನೀಡಿದ್ದಾರೆ ಎಂದರೆ ಸರಿಯಲ್ಲ. ಈ ಸಂಬಂಧವಾಗಿ ನಾನು ಆರೋಪಿತರ ವಿರುದ್ಧ ಸಿವಿಲ್ ಪ್ರಕರಣ ದಾಖಲಿಸಿರುತ್ತೇನೆ. ನಾನು 9 ರಿಂದ 12 ನೇ ಆರೋಪಿತರ ವಿರುದ್ಧ ತೊಂದರೆ ಕೊಡುವ ಉದ್ದೇಶದಿಂದ ಈ ಸುಳ್ಳು ದೂರನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈಗಲೂ ಸಹ ಆಸ್ತಿ ಸಂ.122/3 ಖಾಲಿ ನಿವೇಶನವಾಗಿಯೇ ಉಳಿದಿದೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ